ಯಲಹಂಕ ಸೇತುವೆ ಉದ್ಘಾಟನೆ ಮಾಡಿದ ಸಿಎಂ । ಕನ್ನಡ ವಿರೋಧಿ ಸರಕಾರ ಎಂದ ಜೆಡಿಎಸ್, ಹೋರಾಟಗಾರರು

# ವಿವಾದಿತ ಸಾವರ್ಕರ್ ಮೇಲ್ಸೇತುವೆ ನಾಮಕರಣ

9/9/20

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಯಲಹಂಕ ಉಪನಗರ ಮದರ್ ಡೈರಿ ವೃತ್ತದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಮೇಲ್ಸೇತುವೆ ವೀರ ಸಾವರ್ಕರ್ ಹೆಸರನ್ನಿಡಬಾರದೆಂದು ಪ್ರತಿಪಕ್ಷಗಳು ಹಾಗೂ ಕನ್ನಡಪರ ಸಂಘಟನೆಗಳ ಪರ ವಿರೋಧದ ನಡುವೆ ಲೋಕಾರ್ಪಣೆಯಾಗಿದೆ.

ನಂತರ ಮಾತನಾಡಿದ ಸಿಎಂ ಬಿ.ಎಸ್. ಯಡಿಯೂರಪ್ಪ, ಯಲಹಂಕ ಉಪನಗರದ ಮೇಲ್ಸೇತುವೆ ಸೇತುವೆಗೆ ತನ್ನ ಸಂಪೂರ್ಣ ಜೀವನ ಸ್ವಾತಂತ್ರ್ಯಕ್ಕೆ ಮೀಸಲಿಟ್ಟಿದ್ದ ಸ್ವಾತಂತ್ರ್ಯ ಸೇನಾನಿ ವೀರ ಸಾವರ್ಕರ್ ಹೆಸರನ್ನಿಟ್ಟು ಉದ್ಘಾಟನೆ ಮಾಡಲಾಗಿದೆ. ಬೆಂಗಳೂರು ಸೇರಿ ಎಲ್ಲ ನಗರ ಅಭಿವೃದ್ಧಿ ಮಾಡಲು ಸರಕಾರ ಬದ್ಧವಾಗಿದೆ. ನಗರೋತ್ಥಾನ, ವಿಶೇಷ ಮೂಲಭೂತ ಸೌಕರ್ಯ ಯೋಜನೆಯಡಿ 7300ಕೋಟಿ ಯೋಜನೆಗಳ ಅನುಷ್ಠಾನ ಗ್ರೇಡ್ ಸಪರೇಟರ್, ಕೆರೆ ಅಭಿವೃದ್ಧಿ, ರಸ್ತೆ, ನೀರುಗಾಲುವೆ, ಉದ್ಯಾನ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಘನತ್ಯಾಜ್ಯ ನಿರ್ವಹಣೆ ಹಾಗೂ ಕೊಳಚೆ ನೀರು ಸಂಸ್ಕರಣೆಗೆ 999ಕೋಟಿ ರು ಅನುದಾನ. ಸ್ಮಾರ್ಟ್ ಸಿಟಿ ಯೋಜನೆಯಡಿ 30ಕಿ.ಮೀ ಉದ್ದದ 36 ರಸ್ತೆ ಅಭಿವೃದ್ಧಿ ಮಾಡಲಾಗುವುದು. ಯಲಹಂಕ ಕ್ಷೇತ್ರದ ಅಭಿವೃದ್ಧಿಗೆ 400ಕೋಟಿ ಅನುದಾನ ನೀಡಲಾಗುವುದು ಎಂದು ತಿಳಿಸಿದರು.

ನಂತರ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಮಾತನಾಡಿ, ರಾಷ್ಟ್ರ ಪುರುಷರಿಗೆ ಯಾವುದೇ ಗಡಿ ಇರುವುದಿಲ್ಲ. ದೇಶಭಕ್ತಿಯ ಸಿಂಚನವಾಗಬೇಕು ಎಂಬ ನಿಟ್ಟಿನಲ್ಲಿ ಸ್ವಾತಂತ್ರ್ಯ ಯೋಧನ ಸಾವರ್ಕರ್ ಹೆಸರನ್ನು ಇಟ್ಟಿದ್ದೇವೆ. ವಿರೋಧಿಸುವವರು ಸಾವರ್ಕರ್ ಜೀವನ ಚರಿತ್ರೆ ಓದಬೇಕು. ಯಲಹಂಕದಲ್ಲಿ ಇದೇ ಮಾದರಿಯಲ್ಲಿ ನಾಲ್ಕು ಮೇಲ್ಸೇತುವೆ ನಿರ್ಮಾಣ ಮಾಡಲಾಗುವುದು. ಅದಕ್ಕೆ ರಾಷ್ಟ್ರ ನಾಯಕರ ಹೆಸರಿಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿಸಿಎಂ ಅಶ್ವಥ್ ನಾರಾಯಣ್, ಗೃಹಸಚಿವ ಬಸವರಾಜ ಬೊಮ್ಮಾಯಿ, ಸಚಿವ ಸಿ.ಟಿ. ರವಿ, ಬೈರತಿ ಬಸವರಾಜು, ಬಿಬಿಎಂಪಿ ಸದಸ್ಯರಾದ ಎಂ. ಸತೀಶ್, ಚಂದ್ರಮ್ಮ ಕೆಂಪೇಗೌಡ, ಎಂ. ನೇತ್ರಾ ಪಲ್ಲವಿ ಇದ್ದರು.



## ಬಿಗಿ ಬಂದೋಬಸ್ತ್

ಸೇತುವೆಗೆ ವೀರ ಸಾವರ್ಕರ್ ಹೆಸರನ್ನಿಟ್ಟಿರುವುದನ್ನು ವಿರೋಧಿಸಿ ಯಲಹಂಕ ಕ್ಷೇತ್ರ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಮುಖಂಡ ಎಂ.ಎನ್ ಗೋಪಾಲಕೃಷ್ಣ ನೇತೃತ್ವದ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್ ಅಧ್ಯಕ್ಷತೆಯಲ್ಲಿ ಸಿಎಂ ಯಡಿಯೂರಪ್ಪ ಅವರಿಗೆ ಕಪ್ಪುಪಟ್ಟಿ ಪ್ರದರ್ಶಿಸುತ್ತಾರೆಂಬ ಮಾಹಿತಿ ಹಿನ್ನೆಲೆಯಲ್ಲಿ ಎನ್ಇಎಸ್ ವೃತ್ತದ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಇಬ್ಬರು ಸರ್ಕಲ್ ಇನ್ಸ್‌ಪೆಕ್ಟರ್, ಎಸಿಪಿ, ಡಿ.ಆರ್. ಕೆ.ಎಸ್.ಆರ್.ಪಿ, ಎರಡು ಬಸ್ ನಿಯೋಜಿಸಿ ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲು ಎರಡು ಬಸ್ ವ್ಯವಸ್ಥೆ ಮಾಡಿ ಬಂದೋಬಸ್ತ್ ಮಾಡಲಾಗಿತ್ತು.

## ಜೆಡಿಎಸ್ ವಿರೋಧ

ರಾಜ್ಯ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ನಾಡ ವಿರೋಧಿ ನೀತಿ ಅನುಸರಿಸುತ್ತಿದೆ. ಯಲಹಂಕ ಮೇಲ್ಸೇತುವೆಗೆ ಸಾವರ್ಕರ್ ಹೆಸರಿಡುತ್ತಿರುವುದು ಬಿಜೆಪಿ ನಾಡ ವಿರೋಧಿ ಧೋರಣೆಯ ಭಾಗ ಎಂದು ಜೆಡಿಎಸ್ ನಾಯಕ ಆರ್. ಪ್ರಕಾಶ್ ಕಿಡಿಕಾರಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಈ ಸರಕಾರಕ್ಕೆ ರಾಜ್ಯದ ಯಾವುದೇ ಮಹನೀಯರ ಹೆಸರು ಸಿಗಲಿಲ್ಲವೇ..? ತಾಕತ್ತಿದ್ದರೆ ಬಿಜೆಪಿ ಸರಕಾರ ಬಹಿರಂಗವಾಗಿ ಹೇಳಿಕೆ ನೀಡಲಿ ಕರ್ನಾಟಕದಲ್ಲಿ ಯಾವುದೇ ವೀರ, ಮಹನೀಯರ ಹೆಸರು ಸಿಗಲಿಲ್ಲ ಹಾಗಾಗಿ ಮಹಾರಾಷ್ಟ್ರದವರ ಹೆಸರನ್ನು ಆರಿಸಿದ್ದೇವೆ ಎಂದು ಹೇಳಲಿ ಎಂದಿದ್ದಾರೆ.